## 68

# ಕಳೆದು ಕೊಂಡ ಅವಕಾಶಗಳು

### ಓದುವ ಮನೆಪಾಠ #28

VII. ಯೇಸುವಿನ ಸೇವೆಯ ಅಂತಿಮ ವಾರ.

A. ಶುಕ್ರವಾರ ಮಧ್ಯಾಹ್ನ - ಆತನು ಬೆಥಾನ್ಯಕ್ಕೆ ಬಂದನು (ಯೋಹಾನ 11:55-12:1).

B. ಶನಿವಾರ ಸಾಯಂಕಾಲ - ಬೆಥಾನ್ಯದಲ್ಲಿ ಭೋಜನ (ಮತ್ತಾಯ 26:6-13; ಮಾರ್ಕ 14:3-9; ಯೋಹಾನ 12:2-11).

C. ಭಾನುವಾರ ಮಧ್ಯಾಹ್ನ: ಅರಸನಂತೆ ಯೆರೂಸಲೇಮಿಗೆ ಪ್ರವೇಶ (ಮತ್ತಾಯ 21:1-11; ಮಾರ್ಕ 11:1-11; ಲೂಕ 19:29-44; ಯೋಹಾನ 12:12-19).

D. ಸೋಮವಾರ: ಅಂಜೂರ ಮರವನ್ನು ಶಪಿಸಿದ್ದು, ದೇವಾಲಯದ ಶುದ್ಧತೆ, ಕುಂಟ ಹಾಗೂ ಕುರುಡನನ್ನು ಗುಣಪಡಿಸಿದ್ದು (ಮತ್ತಾಯ 21:12-19; ಮಾರ್ಕ 11:12-19; ಲೂಕ 19:45-48; 21:37, 38).

E. ಮಂಗಳವಾರ: "ಪ್ರಶ್ನೆಗಳ ಮಹಾದಿನ."

1. ಪರಿಚಯ: ಒಣಗಿ ಹೋದ ಅಂಜೂರದ ಮರ (ಮತ್ತಾಯ 21:20-22; ಮಾರ್ಕ 11:20-26).

### ಮುನ್ನುಡಿ

ನಾನು ನನ್ನ ಮುಖ್ಯ ಪ್ರಸ್ತಾಪವನ್ನು ಮಾಡುವ ಮುನ್ನ ಆಗಾಗ್ಗೆ ಕೆಲವು ಸಂಗತಿಗಳನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಅವುಗಳನ್ನು ಮಾಡಿದ ನಂತರ ಅಲ್ಪ ವಿರಾಮವನ್ನು ಪಡೆದು "ಅದು ನನ್ನ *ಪರಿಚಯ"* ಎಂದು ಹೇಳುತ್ತೇನೆ. ಈಗ ನನ್ನ ಪ್ರಸಂಗವನ್ನು ಹೇಳುತ್ತೇನೆ. ನನ್ನ ಪ್ರಸಂಗಕ್ಕೆ ನೀಡಿರುವ ಕಾಲಾವಕಾಶವು ಮುಗಿದಿರುವದರಿಂದ, ಈ ಮಾತುಗಳು ಕಣ್ಣುಗಳನ್ನು ಅಗಲ ಮಾಡುತ್ತವೆ. ಅದರಂತೆ ಕ್ರಿಸ್ತನ ಜೀವನ ಚರಿತ್ರೆಯ ಅಧ್ಯಯನಕ್ಕೆ ನೀಡಿದ ಸಮಯವು ಇದೇ ರೀತಿ ಇರುತ್ತದೆ: ಹಿಂದಿನ ಪಾಠದಲ್ಲಿ "ಮುನ್ನುಡಿ"ಯನ್ನು ಮುಗಿಸಿದ್ದೇನೆ, ಹಾಗೂ ಮುಖ್ಯ ಅಂಶಕ್ಕೆ ಈಗ ಬರೋಣ!

ಸುವಾರ್ತಾ ಪಾಠಗಳಲ್ಲಿ ಅಗತ್ಯವಾದ ಸತ್ಯಗಳನ್ನು ಉಪದೇಶಿಸಲಾಗಿದೆ. ಯೇಸುವಿನ ಅಂತ್ಯದ ಸಂಗತಿಗಳನ್ನು ಹಾಗೂ ಮರಣ ಪುನರುತ್ಥಾನಗಳನ್ನು ಅರಿಯುವ ಸಲುವಾಗಿ, ಆ ಸತ್ಯಾಂಶಗಳನ್ನು ಹೇಳಿದ್ದೇನೆ. ರಿಚರ್ಡ್ ರೋಜನ್‌ರವರು ಈ ಕಾಲವನ್ನು, "ಲೋಕವನ್ನು ಬದಲಿಸಿದ, ಕಡೇಯ ಎಂಟು ದಿವಸಗಳು"[2] ಎಂದಿದ್ದಾರೆ. ಸುವಾರ್ತೆಗಳಲ್ಲಿನ ಮೂರರ ಒಂದು ಅಂಶವನ್ನು ಈ ದಿವಸಗಳಿಗಾಗಿ ಉಪಯೋಗಿಸಲಾಗಿದೆ.[3] ಪ್ರಮುಖವಾಗಿ ಯೋಹಾನನು ಕ್ರಿಸ್ತನ ಅಂತ್ಯದ ಜೀವನ ಚರಿತ್ರೆಯನ್ನು ವಿವರಿಸಲು ಹೆಚ್ಚಾದ ಸಮಯವನ್ನು ಬಳಸಿದ್ದಾನೆ. ಯೇಸು ಬೇಥಾನ್ಯಕ್ಕೆ ಬಂದ ಸಮಯದಿಂದ ನಡೆದ ಘಟನೆಗಳನ್ನು ಇಪ್ಪತ್ತೊಂದು ಅಧ್ಯಾಯಗಳಲ್ಲಿ ದಾಖಲು ಮಾಡಿದ್ದಾನೆ.

ಕರ್ತನ ಈ ಲೋಕದ ಅಂತ್ಯದ ದಿವಸಗಳನ್ನು "ಕ್ರಿಸ್ತನ ಯೆರೂಸಲೇಮಿನ ಸೇವೆ" ಎಂದು ತಿಳಿಯಬಹುದು. ಈಗ ಕಳೆದಷ್ಟು ಸಮಯವನ್ನು ಶಕ್ತಿಯನ್ನು ಹಿಂದೆ ಯೇಸು ಉಪಯೋಗಿಸಿರುವದಿಲ್ಲ. ಯಾಕಂದರೆ ಯೆರೂಸಲೇಮಿನ ನಾಯಕರನ್ನು ಬದಲಾಯಿಸಿ,

ಅವರ ಮೂಲಕ ಪೂರ್ಣ ಜನಾಂಗಗಳನ್ನೇ ಬದಲಾಯಿಸಿ ದೇವರು ಇಸ್ರಾಯೇಲ್ಯರಿಗಾಗಿ ಮಾಡಿದ ಯೋಜನೆಗೆ ತರಲು ಪ್ರಯತ್ನಿಸಿದನು.[4] ಆದರೆ ಈ ಶ್ರೇಷ್ಟ ಅವಕಾಶವನ್ನು ಅವರು ಕಳಕೊಂಡದ್ದು ದೂರದೃಷ್ಟವೆ.

## ನಂಬುವ ಅವಕಾಶ

## (ಮತ್ತಾಯ 26:6-13; ಮಾರ್ಕ 14:3-9; ಯೋಹಾನ 11:55-12:11)

"ಲೋಕವನ್ನು ಬದಲಾಯಿಸಿದ, ಆ ಎಂಟು ದಿನಗಳ, ಮುನ್ನುಡಿಯನ್ನು ಯೋಹಾನನು ತಿಳಿಸಿದನು." "ಆಗ ಯೆಹೂದ್ಯರ ಪಸ್ಕ ಹಬ್ಬ ಹತ್ತಿರವಾಗಿತ್ತು" (ಯೋಹಾನ 11:55ಎ). ಇಸ್ರಾಯೇಲ್ಯರು ಐಗುಪ್ತದಲ್ಲಿರುವ ಅವರ ಬಾಗಿಲು, ಚೌಕಟ್ಟುಗಳಿಗೆ ಕುರಿಮರಿಯ ರಕ್ತವನ್ನು ಪ್ರೋಕ್ಷಿಸಿದಾಗ, ಕರ್ತನು ಅಂಥವರ ಮನೆಗಳನ್ನು (ವಿಮೋಚನಕಾಂಡ 12:1-28).[5] ಹಾದು ಹೋದ, ಇತಿಹಾಸದ ನೆನಪಾಗಿರುತ್ತದೆ.[6] ತಾವು ವಿಮೋಚನೆಗೊಂಡ ದಿನದಂದು ಮಾಡಿದ ಯಜ್ಞವಂತೆ, ಪ್ರತಿ ಪಸ್ಕದಲ್ಲಿ ಆಚರಣೆ ಮಾಡುತ್ತಿದ್ದರು. "ಪೂರ್ಣಾಂಗವಾದ ನಿಷ್ಕಳಂಕ" ದೇವ ಕುರಿಮರಿ ಯಜ್ಞವನ್ನು ಸಮರ್ಪಿಸಲು ಇದು ತಕ್ಕ ಸಮಯವಾಗಿತ್ತು (1 ಪೇತ್ರ 1:19; ಯೋಹಾನ 1:29).

"ಜನರು ತಮ್ಮನ್ನು ಶುದ್ಧಿಮಾಡಿಕೊಳ್ಳುವದಕ್ಕಾಗಿ ಹಬ್ಬಕ್ಕಿಂತ ಮುಂಚೆ ಹಳ್ಳಿಗಳಿಂದ ಯೆರೂಸಲೇಮಿಗೆ ಬಂದರು" (ಯೋಹಾನ 11:55ಬಿ). ಆತ್ಮೀಕ ಕಾರ್ಯಗಳ ಮುಂಚೆ, ಸಾಂಪ್ರದಾಯಿಕ ಶುದ್ಧತೆಯ ಅಗತ್ಯವಿತ್ತು (ನೋಡಿ ವಿಮೋಚನಕಾಂಡ 19:10, 11). ಪಸ್ಕದ ಮೊದಲು (ನೋಡಿ 2 ಪೂರ್ವಕಾಲವೃತ್ತಾಂತ 30:13-20; ವಚನ 17). ಸಹ ಇದನ್ನು ಮಾಡ ಬೇಕಿತ್ತು. ಶುದ್ಧರಾಗದೆ ಇದ್ದವರಿಗೆ ಪಸ್ಕದ ಊಟ ನಿಷಿದ್ದವಾಗಿತ್ತು (ನೋಡಿ ಯೋಹಾನ 18:28). ಹಬ್ಬದ ಸಮಯದಲ್ಲಿ ಯೆರೂಸಲೇಮಿನಲ್ಲಿ ಜನ ಸಂದಣಿಯ ಹೆಬ್ಬಾದ್ದರಿಂದ ಶುದ್ಧಪಡಿಸಿಕೊಳ್ಳು ವದಕ್ಕೆ ಅನೇಕ ದಿವಸಗಳಗುತ್ತಿತ್ತು.[7] ಆದ್ದರಿಂದ ಪ್ರವಾಸಿಗರು ಹಬ್ಬದಲ್ಲಿ ಭಾಗವಹಿಸಿಸುವಕ್ಕೆ ಸಿದ್ಧಪಡಿಸಿಕೊಳ್ಳುತ್ತಿದ್ದು. "ಜನಸಂದಣಿ" ಎಂದರೆ ವಾರಗಳ ಹಿಂದೆಯೇ ಬಂದು ನೆಲಸುತ್ತಿದ್ದ ಪ್ರಯಾಸಿಗರು.

ಯೋಹಾನನ ಪ್ರಕಾರ, "ಅವರು ಯೇಸುವನ್ನು ಹುಡುಕುತ್ತಾ ದೇವಾಲಯದಲ್ಲಿ ನಿಂತುಕೊಂಡು, ಅವನು ಹಬ್ಬಕ್ಕೆ ಬಾರದೆ ಇದ್ದಾನೋ? ನಿಮಗೆ ಹೇಗೆ ಕಾಣುತ್ತದೆ ಎಂದು ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು" (ಯೋಹಾನ 11:56). ಆತನು ಲಾಜರನನ್ನು ಎಬ್ಬಿಸಿದ್ದ ಕಾರಣದಿಂದ, ಕ್ರಿಸ್ತನನ್ನು ಕೊಲ್ಲಬೇಕೆಂದು ಅಧಿಕೃತ ನಿರ್ಣಯವನ್ನು ಮಾಡಿದ್ದರು (ಯೋಹಾನ 11:1-53). ಅವರು ಆತನನ್ನು ನೋಡಬಯಸಿದ್ದರು (ನೋಡಿ ಯೋಹಾನ 12:9, 17-19). ಆದರೆ ಮಹಯಾಜಕರೂ ಫರಿಸಾಯರೂ ಆತನನ್ನು ಹಿಡಿಯಬೇಕೆಂದು ಯೋಚಿಸಿ, ಅವನಿರುವ ಸ್ಥಳವು ಯಾರಿಗಾದರೂ ತಿಳಿದರೆ ತಮಗೆ ತಿಳಿಸಬೇಕೆಂದು ಅಪ್ಪಣೆ ಕೊಟ್ಟಿದ್ದರು (ಯೋಹಾನ 11:57).[8] ಯೆರೂಸಲೇಮು ಹಾಗೂ ಸುತ್ತಲಿನ ಪ್ರದೇಶಗಳಿಗೆ ಸಾರ್ವಜನಿಕ ಆಜ್ಞೆಯನ್ನು ಹೊರಡಿಸಿರಬಹುದು.[9] ಜನರು ಆತನನ್ನು ಎಂಥವನೆಂದು ನೋಡ ಲಪೇಕ್ಷಿಸಿದರೂ, ಅಪಾಯವಿದ್ದದರಿಂದ ಆತನು ಹೊರಗೆ ಬರಲಾರನೆಂದು ತಿಳಿದಿದ್ದರು ಆದ್ದರಿಂದ, ಯೇಸು ಯೆರಿಕೋವಿನ[10] ತನ್ನ ಅಂತಿಮ ಪ್ರಯಾಣವನ್ನು ಪ್ರಯಾಸದಿಂದ ಮಾಡಿದನು ಎಂದು ಯೋಹಾನನು ತಿಳಿಸಿರುವನು.

### ಅವಕಾಶವನ್ನು ಪೂರೈಸಲಾಯಿತು

### (ಮತ್ತಾಯ 26:6-13; ಮಾರ್ಕ 14:3-9; ಯೋಹಾನ 12:1-9, 11)

ಪಸ್ಕ ಹಬ್ಬವು ಇನ್ನು ಆರು ದಿವಸ ಮುಂಚೆ ಇರಲಾಗಿ ಯೇಸು ಬೇಥಾನ್ಯಕ್ಕೆ ಬಂದನು

(ಯೋಹಾನ 12:1).[11] ಬೆಥನಿಯು ಯೆರೂಸಲೇಮಿನಿಂದ ಎರಡು ಮೈಲಿ ಅಂತರದಲ್ಲಿತ್ತು (ಯೋಹಾನ 11:18).[12] ಅಲ್ಲಿ ಮಾರ್ಥ ಲಾಜರ ಹಾಗೂ ಮರಿಯಳು ವಾಸಿಸಿದ್ದರು (ಯೋಹಾನ 11:1). ಈ ಮುಂಚೆ ಕ್ರಿಸ್ತನು ಅಲ್ಲಿ ಲಾಜರನನ್ನು ಎಬ್ಬಿಸಿದ್ದನು (ಯೋಹಾನ 11:2-46; 12:1). ಪ್ರಾಯಶಃ ಯೇಸು ಸೂರ್ಯೋದಯದ ಮುಂಜಾನೆ ಶುಕ್ರವಾರ ಅಲ್ಲಿಗೆ ಬಂದಿರಬಹುದು.[13]

ಯೇಸು ಸಬ್ಬತ್ ದಿನದಂದು ದೇವಮಂದಿರಕ್ಕೆ ಭೇಟಿನೀಡಿ, ಪ್ರಾಯಶಃ ತನ್ನ ಸ್ನೇಹಿತರನ್ನು ಸಂಧಿಸಿರಬಹುದು. ನಂತರ ಶನಿವಾರ ವಾರದ ಸಬ್ಬದ ದಿನದಂದು ಸಿಮೋನನ ಮನೆಯಲ್ಲಿ "ಕಡೇಯ ಭೋಜನದ" ಏರ್ಪಾಟು ಮಾಡಿರಬಹುದು (ಮತ್ತಾಯ 26:6; ಮಾರ್ಕ 14:3), ಒಂದು ವೇಳೆ ಅವನು ಕಷ್ಟರೋಗದಿಂದ ಬಿಡುಗಡೆ ಹೊಂದಿರಬಹುದುಯ[15] ಅದು ಕ್ರಿಸ್ತನ ಹಾಗೂ ಲಾಜರನ ಗೌರವಾರ್ಥದ "ಭೋಜನ" ವಿರಬಹುದು (ಯೋಹಾನ 12:2ಬಿ, 9).

"ಭೋಜನದ ಸಮಯದಲ್ಲಿ" ಮರಿಯಳು ಆತನನ್ನು ಅಭಿಷೇಕಿಸಿದ "ಕ್ರಿಯೆಯನ್ನು ಗಮನಿಸುತ್ತೇವೆ.[16] ಜನರು ಈ ಕ್ರಿಯೆಗಾಗಿ ಮರಿಯಳನ್ನು ಟೀಕೆ ಮಾಡಲು[17] ಯೇಸು ಆಕೆಯನ್ನು ಹೊಗಳಿದನು:

> ಯೇಸು ಅದನ್ನು ತಿಳಿದು ಅವರಿಗೆ - ಈ ಸ್ತ್ರೀಗೆ ಯಾಕೆ ತಂದರೆಕಡುತ್ತೀರಿ? ಈಕೆ ನನಗೆ ಓಳ್ಳೇ ಕಾರ್ಯವನ್ನು ಮಾಡಿದ್ದಾಳೆ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ, ಆದರೆ ನಾನು ನಿಮ್ಮಲ್ಲಿ ಯಾವಾಗಲೂ ಇರುವದಿಲ್ಲ. ಈಕೆಯು ಈ ತೈಲವನ್ನು ನನ್ನ ದೇಹದ ಮೇಲೆ ಹೊಯಿದದ್ದು ನನ್ನ ಉತ್ತರಕ್ರಿಯೆಗಾಗಿಯೇ. ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಎಂದು ಹೇಳಿದನು (ಮಾರ್ಕ 14:6-9; ನೋಡಿ ಮತ್ತಾಯ 26:10-13).[18]

"ಯೆಹೂದ್ಯರ ಸಮಾಹವು ಯೇಸುವನ್ನು ಹಾಗೆ ಲಾಜರನನ್ನು ನೋಡಲು ಬಂದರು" (ಯೋಹಾನ 12:9). ಕ್ರಿಸ್ತನ ಶಕ್ತಿಯುತವಾದ ಕ್ರಿಯೆಯನ್ನು ನೋಡುವ ಅವಕಾಶದಿಂದ ಬಂದಿದ್ದರು. ಅದರ ಪರಿಣಾಮವಾಗಿ, "ಯೆಹೂದ್ಯರಲ್ಲಿ ಅನೇಕರು ಯೇಸುವನ್ನು ನಂಬಿದರು" (ಯೋಹಾನ 12:11).

### ಅವಕಾಶವನ್ನು ಧಿಕ್ಕರಿಸಿದರು (ಯೋಹಾನ 12:10, 11)

ಯೆಹೂದ್ಯರು ಸಹ ಸ್ಪರ್ಷಿಸಲ್ಪಟ್ಟಿದ್ದರು. ಆತನಿಗುಂಟಾದ ಪ್ರಖ್ಯಾತಿಯು ಸಹ ಬೆಂಕಿಯ ಉರಿಯನ್ನು ಹಿಗ್ಗಿಸಿತು. ಇದರಿಂದ ದ್ವೇಷ ಹೆಚ್ಚಾಯಿತು.[19] ಇದರಿಂದ ಹಿರಿಸಭೆಯವರ ಮೂರ್ಖತನದ ಅಸೂಯೆಯ ನಿಮಿತ್ತ ಅವರು ಒಂದು ಕೆಟ್ಟ ನಿರ್ಣಯವನ್ನು ಮಾಡಲು ಸಾಧ್ಯವಾಯಿತು: ಮಹಾಯಾಜಕರು ಲಾಜರನನ್ನು ಕೊಲ್ಲಬೇಕೆಂದು ಆಲೋಚಿಸಿದರು. ಯಾಕಂದರೆ ಅವನ ದೆಸೆಯಿಂದ ಯೆಹೂದ್ಯರಲ್ಲಿ ಅನೇಕರು ಹೋಗಿ ಯೇಸುವನ್ನು ನಂಬುವವರಾದರು (ಯೋಹಾನ 12:11). R. ಲಾಜರನ ತಪ್ಪೇನೆಂದರೆ, ಸಮಾಧಿಯಲ್ಲಿ ಮಲಗಿರುವ ಬದಲು, ರಸ್ತೆಯಲ್ಲಿ ನಡೆದಾಡುತ್ತದ್ದರಿಂದ, ಅವನು ಅವರಿಗೆ ಅಡ್ಡಿಯಾಗಿದ್ದನು, ಆದ್ದರಿಂದ ಅವನು ಸಾಯಲೇಬೇಕಿತ್ತು.[20]

## ಕೊಂಡಾಟದ ಅವಕಾಶ (ಮತ್ತಾಯ 21:1-11; ಮಾರ್ಕ 11:1-11; ಲೂಕ 29-44; ಯೋಹಾನ 12:12-19)

"ಮರುದಿವಸ" (ಯೋಹಾನ 12:12ಎ)[21] ಅಂದರೆ, ಸಾಯಂಕಾಲದ ಸಮಯವಿರಬಹುದು (ಮಾರ್ಕ 11:11). ಯೇಸು ಯೆರೂಸಲೇಮಿನಿಂದ ಎರಡು ಮೈಲು

ನಡೆದು ಬೆಥಾನ್ಯಕ್ಕೆ ಹೋದನು. ಈ ಪ್ರವೇಶವನ್ನು "ಜಯದ ಪ್ರವೇಶ" ಎನ್ನಲಾಗಿದೆ. ಅದರ ಮಹತ್ವದ ನಿಮಿತ್ತವಾಗಿ ನಾಲ್ಕು ಸುವಾರ್ತೆಗಳಲ್ಲಿ ಈ ಕುರಿತ ದಾಖಲೆಗಳಿವೆ.[22]

## ಅವಕಾಶದ ಪೂರೈಕೆ (ಮತ್ತಾಯ 21:1-11; ಮಾರ್ಕ 11:1-11; ಲೂಕ 19:29-38; ಯೋಹಾನ 12:12-18)

ಆನಂದವು ಉತ್ತುಂಗಕ್ಕೇರಿತು. ಏಕೆಂದರೆ ಜನ ಸಮೂಹವು ಯೇಸುವನ್ನು ಸುತ್ತುವರೆದಿತ್ತು (ಮತ್ತಾಯ 21:9; ಮಾರ್ಕ 11:9). ಬೆಥಾನ್ಯದ ಹತ್ತಿರವಿದ್ದ ಎಣ್ಣೆಯ ಮರಗಳ ಗುಡ್ಡದ ಬಳಿಯಲ್ಲಿ ಬೆತ್ಫಾಜೆ ಎಂಬ ಪಟ್ಟಣವಿತ್ತು (ಮತ್ತಾಯ 21:1; ಮಾರ್ಕ 11:1; ಲೂಕ 19:29).[23] ಆ ಪಟ್ಟಣದಲ್ಲಿದ ಒಂದು ಕತ್ತೆಯ ಮರಿಯನ್ನು ಹುಡುಕಿ ತರಲು, ತನ್ನ ಎರಡು ಶಿಷ್ಯರನ್ನು ಯೇಸು ಅಲ್ಲಿಗೆ ಕಳುಹಿಸಿದ್ದನು (ಮತ್ತಾಯ 21:1-3).[24] ಅವರು ಕತ್ತೆಮರಿಯನ್ನು ತಂದು ಅದರ ಮೇಲೆ ಬಟ್ಟೆಗಳನ್ನು ಹಾಸಿದರು (ಮತ್ತಾಯ 21:6, 7). ಕತ್ತೆಯನ್ನು ಆತನು ತನ್ನ ವಾಹನ ಮಾಡಿಕೊಂಡನು.[25] ನಾನು ಇರುವ ಸ್ಥಳದಲ್ಲಿ ಕುದುರೆ ಸವಾರಿ ಮಾಡಬಹುದೇ ಹೊರತು, ಕತ್ತೆಯ ಸವಾರಿ ಮಾಡುವದು ಅವಮಾನಕರ. ಯೆಹೂದ್ಯರ ಪ್ರಕಾರ, ವಿಶೇಷ ಸಮಯಗಳಲ್ಲಿ ರಾಜಕುಮಾರರು ಸಹ ಕತ್ತೆ ಸವಾರಿ ಮಾಡುತ್ತಿದ್ದರು.[26] ಕುದುರೆಯ ಯುದ್ಧದ ಸಂಕೇತವಾಗಿತ್ತು (ಯೋಬ 39:19-25), ಆದರೆ ಕತ್ತೆಯ ಶಾಂತಿಯ ಸಂಕೇತವಾಗಿತ್ತು. ಸಮಾಧಾನದ ಪ್ರಭುವು ಕತ್ತೆಯ ಸವಾರಿ ಮಾಡಿದು ಪ್ರವಾದನೆಯ ಈಡೇರಿಕೆ (ಮತ್ತಾಯ 21:4 5; ಯೋಹಾನ 12:14, 15).[27]

ಆತನು ಕತ್ತೆಯನ್ನು ಏರಿದಾಗ, ಜನರು ತಮ್ಮ ಬಟ್ಟೆಗಳನ್ನು ಕತ್ತೆಯು ಬರುತ್ತಿದ್ದ ಮಾರ್ಗದಲ್ಲಿ ಹಾಸಿದರು (ಮಾರ್ಕ 11:18).[28] ಅವರ ಸ್ವರವು ಬೆಟ್ಟದಿಂದ, ಬೆಟ್ಟಕ್ಕೆ ಹರಡಿತ್ತು:

> "ಆತನ ಹಿಂದೆಯೂ ಮುಂದೆಯೂ ಗುಂಪಾಗಿ ಹೋಗುತ್ತಿದ್ದ ಜನರು" (ಮತ್ತಾಯ 21:9).
>
> "ನಮ್ಮ ಪಿತೃವಾದ ದಾವೀದನ ರಾಜ್ಯವು ಬರುತ್ತದೆ, ಅದಕ್ಕೆ ಆಶೀರ್ವಾದ; ಮೇಲಣ ಲೋಕಗಳಲ್ಲಿ ಜಯ ಎಂದು ಆರ್ಭಟಿಸಿದರು (ಮಾರ್ಕ 11:10).
>
> "ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ, ಪರಲೋಕದಲ್ಲಿ ಮಂಗಳ, ಮೇಲಣ ಲೋಕಗಳಲ್ಲಿ ಮಹಿಮೆ ಎಂದು ಮಹಾ ಶಬ್ದದಿಂದ ದೇವರನ್ನು ಕೊಂಡಾಡುವದಕ್ಕೆ ತೊಡಗಿದರು" (ಲೂಕ 19:38).

ಕ್ರಿರ್ತನೆ 118,[30] ಸ್ತೊತ್ರವನ್ನು ಜನರು ಉಪಯೋಗಿಸಿದರು ಯೆರೂಸಲೇಮಿನ ಪ್ರವಾಸಿ ಗಳು ಹಾಡುತ್ತಿದ್ದ ಒಂದು ಕೀರ್ತನೆ.[31] ಮೆಸ್ಸೀಯನ ಕುರಿತ ಹೇಳಿಕೆಗಳನ್ನು ಹಾಡುತ್ತಿದ್ದರು: ದಾವೀದ ಕುಮಾರನು, ದಾವೀದನ ರಾಜ್ಯ, ಕರ್ತನ ಹೆಸರಿನಲ್ಲಿ ಬರುವ ಅರಸನು, ಎರಡನೆಯ ಸಾರಿ, ಜನರು ಆತನನ್ನು ಅರಸನನ್ನಾಗಿ ಮಾಡಲು ಸಿದ್ಧವಿದ್ದರು (ನೋಡಿ ಯೋಹಾನ 6:15).

ಕ್ರಿಸ್ತನು ಪ್ರವೇಶಿಸುತ್ತಿದ್ದ ಸುದ್ದಿ ಯೆರೂಸಲೇಮಿಗೆ ತಲುಪಿತು. ಪಟ್ಟಣದ ಜನರು ಆತನನ್ನು ಸಂಧಿಸಲು ಬಂದರು (ಯೋಹಾನ 12:12, 13,17, 18). ಅವರು ಖರ್ಜೂರದ ಗರಿಗಳನ್ನು ಹಿಡಿದು; ಹೊಸನ್ನ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಅಂದರು (ಯೋಹಾನ 12:12, 13).

## ಅವಕಾಶ ಧಿಕ್ಕರಿಸಲ್ಪಟ್ಟಿತು (ಲೂಕ 19:39-44; ಯೋಹಾನ 12:19)

ಈ ಹಿಂದೆ, ಅವರು ಆತನನ್ನು ಅರಸನೆಂದು ಮಾಡಲು ಯತ್ನಿಸಿದಾಗ, ಯೇಸು ಅದನ್ನು

ನಿರಾಕರಿಸಿದ್ದನು (ಯೋಹಾನ 6:15). ಆದರೆ ಏಕೆ ಈಗ ಇದನ್ನು ಆತನು ಪ್ರೋತ್ಸಾಹಿಸಿದನು? ಪ್ರವಾದನೆಯನ್ನು ಈಡೇರಿಸಲು ಮಾತರ ಮಾಡಿದನು (ಮತ್ತಾಯ 21:4). ಅಥವಾ ಯೆರೂಸಲೇಮಿನ ಅಧಿಕಾರಿಗಳು ಆತನನ್ನು ಇಸ್ರಾಯೇಲ್ಯರ ಮೆಸ್ಸೀಯನೆಂದು ಒಪ್ಪಿಕೊಳ್ಳ ಬೇಕೆಂಬ ಕಾರಣದಿಂದಲೂ ಮಾಡಿರಬಹುದು.

ಯೆಹೂದ್ಯರು ಇನ್ನೊಂದು ಅವಕಾಶವನ್ನು ಕಳಕೊಂಡಿದ್ದರು. ಯೇಸುವೇ ಕ್ರಿಸ್ತನು ಎಂದು ಒಪ್ಪಿಕೊಳ್ಳುವ ಅವಕಾಶವನ್ನು ನಿರಾಕರಿಸಿದ್ದರು. ಅವರು ಎರಡು ವಿಧದ ಪ್ರತಿಕ್ರಿಯೆ ತೋರಿದರು: ಮೊದಲನೆದಾಗಿ, "ಬೋಧಕನೇ ನಿನ್ನ ಶಿಷ್ಯರಿಗೆ[33] ಸುಮ್ಮನಿರಲು ಹೇಳು" (ಲೂಕ 19:39). ಜನರ ಶಬ್ದವು ರೋಮಾಯ ಅಧಿಕಾರಿಗಳಿಗೆ ಅಡ್ಡಿ ಉಂಟು ಮಾಡಬಹುದೆಂಬ ಕಾರಣವಿರಬಹುದು.[34] ವಿಶೇಷವಾಗಿ ಆತನೇ ಮೆಸ್ಸೀಯನೆಂಬ ವಿಚಾರವು ಅವರನ್ನು ಆತಂಕಕ್ಕೆ ಒಳಮಾಡಿತ್ತು. ಅದಕ್ಕೆ ಯೇಸು "ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವವು" ಅಂದನು (ಲೂಕ 19:40).

ಎರಡನೆಯದಾಗಿ, ನಾಯಕರುಗಳು ಚಿಂತೆಗೀಡಾದರು. ಯೇಸುವನ್ನು ಯಾರು ಸಹ ಗೌರವಿಸದಂತೆ ನಿಗಾವಹಿಸಿದ್ದರು. ಅವರು ತಮ್ಮ "ಯತ್ನವೇನು ಸಾಗಲಿಲ್ಲ" ಅಂದರೆ (ಯೋಹಾನ 12:19ಎ). "ನೋಡಿರಿ ಲೋಕವೆಲ್ಲಾ ಆತನ ಹಿಂದೆ ಹೋಯಿತಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡರು" (ಯೋಹಾನ 12:19ಬಿ)! ಅವರು ಚಿಂತೆ ಪಡಬೇಕಾದ ಪ್ರಮಯವೇ ಇರಲಿಲ್ಲ. ಜನ ಸಮೂಹ ಕಂಗೆಟ್ಟಿತ್ತು. ಬೇಗನೆ ಈ ಸಮೂಹವು ಯೇಸುವಿಗೆ ತಿರುಗಿ ಬೀಳುವ ಸಾಧ್ಯತೆಯಿತ್ತು.

ಆ ಮೆರವಣಿಗೆಯ ಎಣ್ಣೆ ಮರಗಳ ಗುಡ್ಡವನ್ನು ದಾಟಿ, ಕ್ರಿದ್ರೋನ್ ಕಣಿವೆಗೆ ಸೇರಲಿತ್ತು (ಲೂಕ 19:37; ಯೋಹಾನ 18:1). ಯೇಸು ಈ ಒಂದು ಚಿತ್ರಣವನ್ನು ನೋಡಿ ದುಃಖಕ್ಕೊಳ ಗಾದನು (ಲೂಕ 19:41). ಅವನು ಆ ಪಟ್ಟಣವನ್ನು ನೋಡಿ, ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೆದು ಎಂದು ಅತ್ತನು (ಲೂಕ 19:42).[35] ಅದು ನಿನ್ನ ಕಣ್ಣಿಗೆ ಮರೆಯಾಗಿದೆ. ಒಂದು ವೇಳೆ ಯೆರೂಸಲೇಮು ಆತನನ್ನು ಮೆಸ್ಸೀಯನೆಂದು ಒಪ್ಪಿಕೊಂಡಿದ್ದರೆ ಅವರು ಸಮಾಧಾನ ಹೊಂದುತ್ತಿದ್ದರು. ಆದರೆ ಅಹಂಕಾರವು ಅವರನ್ನು ಕುರುಡು ಮಾಡಿತ್ತು (ಮತ್ತಾಯ 13:15). ಸಮಾಧಾನದ ಬದಲು ಯೆರೂಸಲೇಮು ನಾಶನವನ್ನು ಹೊಂದುವ ಸಾಧ್ಯತೆಯಿತ್ತು:

> ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ. ದೇವರು ನಿನಗೆ ದರ್ಶನಕೊಟ್ಟ ಸಮಯವನ್ನು ನೀನು ತಿಳುಕೊಳ್ಳಲಿಲ್ಲವಾದದರಿಂದ ನಿನ್ನ ವೈರಿಗಳು ಒಡ್ಡುಕಟ್ಟಿ ನಿನ್ನ ಸುತ್ತಲೂ ಮುತ್ತಿಗೆ ಹಾಕಿ ಎಲ್ಲಾ ಕಡೆಗಳಲ್ಲಿಯೂ ನಿನ್ನನ್ನು ಬಂದುಮಾಡಿ ನಿನ್ನನ್ನೂ ನಿನ್ನೊಳಗಿರುವ ನಿನ್ನ ಜನರನ್ನೂ ನಿರ್ಮೂಲಮಾಡಿ ನಿನ್ನಲ್ಲಿ ಕಲ್ಲಿನ ಮೇಲೆ ಕಲ್ಲು ನಿಲ್ಲದಂತೆ ಮಾಡುವ ದಿವಸಗಳು ನಿನ್ನ ಮೇಲೆ ಬರುವವು ಅಂದನು (ಲೂಕ 19:43, 44).

ರೋಮಾಯರು ಅವರ ಪಟ್ಟಣವನ್ನು ಸುತ್ತುವರೆದಾಗ ಆ ಪ್ರವಾದನೆಯ ನೆರವೇರಿತ್ತು. ಕ್ರಿ.ಶ 70ರಲ್ಲಿ ಚಕ್ರವರ್ತಿಯಾದ ತೀತನು 143 ದಿನಗಳ ಕಾಲ ಪಟ್ಟಣವನ್ನು ಅಕ್ರಮಿಸಿದ್ದನು. ಆರು ನೂರು ಸಾವಿರದಷ್ಟು ಯೆಹೂದ್ಯರು ಕೊಲ್ಲಲ್ಪಟ್ಟಿದ್ದರು, ಹಾಗೂ ಸಾವಿರಾರು ಜನರನ್ನು ಹಿಡಿದಿದ್ದರು. ದೇವರು ಯೆರೂಸಲೇಮನ್ನು ಸಂಧಿಸಿದ್ದ ಸಮಯವನ್ನು ನೀಡಿದ್ದನು: ತನ್ನ ಮಗನ ರೂಪದಲ್ಲಿ ಆತನು ಪಟ್ಟಣಕ್ಕೆ ಬಂದಿದ್ದನು (ಯೋಹಾನ 14:19), ಆದರೆ ಅವರು ಆತನನ್ನು ಒಪ್ಪಲು ನಿರಾಕರಿಸಿದರು. ಅವರು ಕಳಕೊಂಡು ಆ ಅವಕಾಶಕ್ಕಾಗಿ ಬೆಲೆ ತೆತ್ತಬೇಕಾಯಿತು.

ಯೇಸುವಿನ ವೈರಿಗಳು ಚಿಂತಾಕ್ರಾಂತರಾದರು, ಆತನು ಅತ್ತನು; ಆದರೆ ಜನ ಸಮೂಹವು ರಜೆಯನ್ನು ಆನಂದಿಸುತ್ತಿದ್ದರು. ಮೆರವಣಿಗೆಯು ಕಿದ್ರೋನ್ ತಗ್ಗನ್ನು ದಾಟಿ,

ಪಟ್ಟಣದ ಬಾಗಿಲನ್ನು ಹತ್ತುತ್ತಿದ್ದರು. ಅವರು ಕಿರಿದಾದ ಪಟ್ಟಣದ ಹಾದಿಗಳನ್ನು ಹಾದು ಹೋಗುವಾಗ, ಅಲ್ಲಿದ್ದ ಜನರು "ಈತನು ಯಾರು?" (ಮತ್ತಾಯ 21:10) ಅನ್ನಲು; "ಈತನು ಆ ಪ್ರವಾದಿ, ಗಲಿಲಾಯದ ನಜರತಿನ ಯೇಸು ಅಂದರು" (ಮತ್ತಾಯ 21:11).

ಜನರು ದೇವಾಲಯಕ್ಕೆ ಬರುವಾಗ ಆನಂದದಲ್ಲಿ ತಲ್ಲೀನರಾಗಿದ್ದರು. ಈಗ ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವನೆಂದು ತಿಳಿದಿದ್ದರು! ನಂತರ ಆತನು ಸುತ್ತಲೂ ನೋಡಿ, ನಂತರ "ಹನ್ನೆರಡು ಮಂದಿ ಶಿಷ್ಯರನ್ನು ಕರಕೊಂಡು ಬೇಥಾನ್ಯಕ್ಕೆ ಹೊರಟು ಹೋದನು" (ಮಾರ್ಕ 11:11). ಜನರು ಎಷ್ಟು ಗೊಂದಲಕ್ಕೆ ಸಿಲುಕಿರಬಹುದು! ಒಂದು ವೇಳೆ ನಾಳೆ ಈ ಕಾರ್ಯ ನಡೆಯಬಹುದು ಎಂದು ತಿಳಿದಿರಬಹುದು!

## ಪುನಶ್ಚೇತನಕ್ಕೆ ಒಂದು ಅವಕಾಶ
## (ಮತ್ತಾಯ 21:12-17; ಮಾರ್ಕ 11:12ಎ;, 15-19; ಲೂಕ 19:45-48)

### ಅವಕಾಶದ ಪೂರೈಕೆ (ಮತ್ತಾಯ 21:12-15;
### ಮಾರ್ಕ 11:12, 15-17; ಲೂಕ 19:45-47)

ಮರುದಿನ ಅವರು ಬೇಥಾನ್ಯವನ್ನು ಬಿಟ್ಟು ಯೆರೂಸಲೇಮಿಗೆ ಹೊರಟರು (ಮಾರ್ಕ 11:12ಎ). ಇದು ಮೌನದ ಮೆರವಣಿಗೆ. ಆತನ ಗುರಿ ದೇವಾಲಯವಾಗಿತ್ತು ತನ್ನ ಆರಂಭದ ಸೇವೆಯಲ್ಲಿ ದೇವಾಲಯವನ್ನು ಶುದ್ಧಮಾಡಿದ್ದನು (ಯೋಹಾನ 2:13-17)[37] ಈಗ ಅದನ್ನು ಪುನಃ ಶುದ್ಧಿಮಾಡುವವನಿದ್ದನು.[38] ತಂದೆಯಾದ ದೇವರ ಅನ್ಯೋನ್ಯತೆಯನ್ನು ಕಳಕೊಂಡದ್ದೇ, ಇಸ್ರಾಯೇಲ್ಯರ ಹೃದಯದ ಸಮಸ್ಯೆಯಾಗಿತ್ತು. ಅದು ಅವರ ಆರಾಧನೆಯಲ್ಲಿ ಎದ್ದು ಕಾಣುತ್ತಿತ್ತು.

> ಬಳಿಗೆ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿ ಅವರಿಗೆ - ನನ್ನ ಆಲಯು ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದದೆ ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ ಎಂದು ಹೇಳಿದನು (ಮತ್ತಾಯ 21:12, 13).

ಸಾರ್ವಜನಿಕವಾಗಿ ಅವರು ಗೌರವ ನೀಡಬೇಕಿದ್ದ ಆಲಯವನ್ನು ಅವರು ಪಟ್ಟಣಕ್ಕೆ ತಲುಪುವ ಹತ್ತಿರದ ದಾರಿ ಮಾಡಿಕೊಂಡಿದ್ದರು. ಕ್ರಿಸ್ತನು ಅದನ್ನು ನಿಲ್ಲಿಸಿದ್ದನು. "ಆತನು ಒಬ್ಬನನ್ನಾದರೂ ಸಾಮಾನು ಹೊತ್ತುಕೊಂಡು[39] ದೇವಾಲಯದೊಳಗೆ ಹಾದು ಹೋಗಗೊಳಿಸಲಿಲ್ಲ" (ಮಾರ್ಕ 11:16).

ಆಲಯವನ್ನು ಶುದ್ಧ ಮಾಡಿದ ನಂತರ, "ಆತನು ಉಪದೇಶ ಮಾಡಿದನು" (ಮಾರ್ಕ 11:17; ಲೂಕ 21:37). ಆಗ ಜನರೆಲ್ಲಾ ಆತನ ಉಪದೇಶವನ್ನು ಕೇಳಿ ಅತ್ಯಾಶ್ಚರ್ಯಪಟ್ಟರು (ಮಾರ್ಕ 11:18). ಆಗ ಕುರುಡರು ಕುಂಟರು ದೇವಾಲಯದಲ್ಲಿ ಆತನ ಬಳಿಗೆ ಬರಲು ಅವರನ್ನು ಸ್ವಸ್ಥ ಮಾಡಿದನು (ಮತ್ತಾಯ 21:14). ದೇವಾಲಯದಲ್ಲಿ ಮಾಡಿದ ಸ್ವಸ್ಥತೆಯ ದಾಖಲು ಇದಾಗಿರುತ್ತದೆ.

ಆ ದಿನ ಆತನು ತನ್ನ ರಾಜ್ಯವನ್ನು ಸ್ಥಾಪನೆ ಮಾಡದೆ ಹೋದದ್ದರಿಂದ ಅವರು ನಿರಾಶೆಗೊಂಡಿರಬಹುದು, ಅದಾಗ್ಯೂ ಆನಂದವು ಮುಂದುವರೆಯಿತು. ತಂದೆ ತಾಯಿಗಳ[40] ಸಂಗಡ ಈ ಹಿಂದೆ ದೇವಾಲಯಕ್ಕೆ ಬಂದಿದ್ದ ಮಕ್ಕಳು ಈ ದಿನವೂ ಸಹ "ಹೊಸನ್ನ ದಾವೀದ ಕುಮಾರನೇ" ಎಂದು ಪ್ರತಿಧ್ವನಿ ಮಾಡಿದ್ದರು (ಮತ್ತಾಯ 21:15ಬಿ).

#### ಕಳಕೊಂಡ ಅವಕಾಶ

#### (ಮತ್ತಾಯ 21:15-17; ಮಾರ್ಕ 11:18, 19; ಲೂಕ 19:47, 48)

ಆದರೆ ಮಹಾಯಾಜಕರೂ, ಶಾಸ್ತ್ರಿಗಳೂ ಆತನು ಮಾಡಿದ ಆಶ್ಚರ್ಯಕವಾದ ಕಾರ್ಯಗಳನ್ನು ಗಮನಿಸಿ ದೇವಾಲಯದಲ್ಲಿ ಕೂಗುತ್ತಿರುವನ್ನು ಕಂಡರೋ (ಮತ್ತ್ಯಾ 21:15ಎ, ಬಿ). ಅವರ ಹೃದಯಗಳು ಕಠಿಣವಾದವು. ಅವರು ಸಿಟ್ಟುಗೊಂಡು, "ಇವರು ಹೇಳುವದನ್ನು ಕೇಳುತ್ತಿಯಾ? ಅಂದರು (ಮತ್ತಾಯ 21:15ಎ, 16ಎ). ಯೇಸು ಹೌದು ಕೇಳುತ್ತೇನೆ. ಸಣ್ಣ ಮಕ್ಕಳ ಬಾಯಿಂದಲೂ, ಮೊಲೆಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ಎಂದಾದರೂ ಓದಲಿಲ್ಲವೋ? ಅಂದನು (ಮತ್ತಾಯ 21:16ಬಿ).[41]

ಆ ಆಶ್ಚರ್ಯಗಳನ್ನು ಕಂಡ ಯೆಹೂದ್ಯರು ಮನಪರಿವರ್ತನೆಗೊಳ್ಳದೆ ಆತನನ್ನು ಕೊಲ್ಲುವ ನಿರ್ಣಯ ಮಾಡಿದರು (ಮಾರ್ಕ 11:18; ಲೂಕ 19:47). ಆತನ ಪ್ರಖ್ಯಾತಿಯನ್ನು ಕಂಡು ಹೆದರಿದರು (ಮಾರ್ಕ 11:18). ಆದರೆ ಜನರೆಲ್ಲರು ಆತನನ್ನು ಉಪದೇಶವನ್ನು ಗಮನಿಸಿ ಕೇಳುತ್ತಿದ್ದರಿಂದ ಏನು ಮಾಡಬೇಕೋ ತೋರಲಿಲ್ಲ (ಲೂಕ 19:48). ರಾತ್ರಿಯಲ್ಲಿ ಆತನನ್ನು ಹಿಡಿಯಲು ಆಗಲಿಲ್ಲ, ಏಕೆಂದರೆ ಆತನು ಇಳುಕೊಂಡಿದ್ದ ಸ್ಥಳವನ್ನು ಅವರು ಅರಿತಿರಲಿಲ್ಲ.[42]

ಹಗಲಿನಲ್ಲಿ ಆತನು ಬೋಧಿಸುತ್ತಿದ್ದನು.[43] ಬಳಿಕ ಅವರನ್ನು ಬಿಟ್ಟು ಪಟ್ಟಣದಿಂದ ಹೊರಟು ಬೇಥಾನ್ಯಕ್ಕೆ ಬಂದು ರಾತ್ರಿ ಇಳುಕೊಂಡನು (ಮತ್ತಾಯ21:17; ಮಾರ್ಕ 11:19).[44]

## ಫಲವನ್ನು ತೋರುವ ಅವಕಾಶ

## (ಮತ್ತಾಯ 21:18-22; ಮಾರ್ಕ 11:12-14, 20-26)

ಈ ಎಲ್ಲಾ ಗೊಂದಲದ ನಡುವೆ ಒಂದು ವಿಚಿತ್ರ ಘಟನೆ ನಡೆಯಿತು. ಅದು ಯೆಹೂದ್ಯ ಜನಾಂಗದ ಕುರಿತ ಒಂದು ಪಾಠವಾಗಿದೆ.

#### ಅವಕಾಶವನ್ನು ಪೂರೈಸಲಾಯಿತು (ಮತ್ತಾಯ 21:18, 19; ಮಾರ್ಕ 11:12-14)

ಸೋಮವಾರ ಮುಂಜಾನೆ ಆತನು ಯೆರೂಸಲೇಮಿಗೆ ಬಂದಾ, "ಆತನಿಗೆ ಹಸಿವಾಯಿತು" (ಮಾರ್ಕ 11:12; ಮತ್ತಾಯ 21:18). ಒಂದು ವೇಳೆ ಆತನು ಹಾಗೂ ಆತನ ಶಿಷ್ಯರು ಮುಂಜಾನೆಯ ಮೊದಲ ಉಪಹಾರವನ್ನು ಸೇವಿಸದೆ ಬಂದಿರಬಹುದು.

ಆಗ ಆತನು ದೂರದಲ್ಲಿ ಎಲೆ ಬಿಟ್ಟಿದ್ದ ಒಂದು ಮರವನ್ನು ನೋಡಿ, ಅದರಲ್ಲಿ ಏನಾದರೂ, ದೊರಕಬಹುದೆಂದು ಬಯಸಿದನು (ಮಾರ್ಕ 11:13ಎ).[45] ಅದು "ಫಲಕಾಲವಲ್ಲ" ಎಂದು ಮಾರ್ಕನು ತಿಳಿಸಿದ್ದಾನೆ (ಮಾರ್ಕ 11:13ಸಿ). ಮೇ ಆರಂಭದಿಂದ ಜೂನ್ ಅಂತ್ಯದವರೆಗೆ ಫಲಕಾಲವಾಗಿದ್ದು,[46] ಪಸ್ಕ ಹಬ್ಬವು ಮಾರ್ಚ್ ಅಂತ್ಯದಿಂದ ಏಪ್ರೀಲ್ ಆರಂಭದಲ್ಲಿ ಜರುಗುವಾಗಿತ್ತು. ಆದೆ ಅದರಲ್ಲಿ ಎಲೆಗಳು ಇದದ್ದರಿಂದ ಅದರಲ್ಲಿ ಫಲವಿರಬಹುದೆಂದು ಯೇಸು ತಿಳಿದಿರಬಹುದು. ಎಲೆಗಳು ಬಿಡುವ ಮೊದಲು ಹಣ್ಣುಗಳು ಬಿಡುತ್ತವೆ. ಎಲೆಗಳು ಇದ್ದದರಿಂದ ಸಣ್ಣ ಕಾಯಿಗಳು ಅದರಲ್ಲಿ ಇರಬಹುದೆಂದು ಬಯಸಬಹುದಾಗಿದೆ.

ಇದಕ್ಕೆ ತದ್ವಿರುದ್ಧವಾಗಿ, ಯೇಸು ಆ ಮರದ ಬಳಿಗೆ ಬಂದಾಗ, ಅದರಲ್ಲಿ ಬರೀ ಎಲೆಗಳನ್ನೇ ಹೊರತು ಪಡಿಸಿ ಮತ್ತೇನೂ ಕಾಣಿಸಲಿಲ್ಲ (ಮಾರ್ಕ 1:13ಬಿ). ಆತನು ಅದನ್ನು ಖಂಡಿಸಿ, "ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣನ್ನು ಎಂದೆಂದು ತಿನ್ನದ ಹಾಗಾಗಲಿ ಎಂದು ಹೇಳಿದನು."[47] ಆತನ ಶಿಷ್ಯರು ಈ ಮಾತನ್ನು ಕೇಳಿಸಿ ಕೊಂಡರು (ಮಾರ್ಕ 11:14; ಮತ್ತಾಯ 21:19 ಮತ್ತು ಮಾರ್ಕ 11:21).

#### ಅವಕಾಶ ಕಳಕೊಂಡರು (ಮತ್ತಾಯ 1:20-22; ಮಾರ್ಕ 11:20-26)

ಬೆಳಿಗ್ಗೆ ಅವರು ಬರುತ್ತಿರುವಾಗ ಆ ಅಂಜೂರದ ಮರವು ಬುಡದಿಂದಲೂ ಒಣಗಿ ಹೋಗಿ

ರುವದನ್ನು ಕಂಡರು (ಮಾರ್ಕ 11:20). ಮರವು ಸಾಮಾನ್ಯವಾಗಿ ನಿಧಾನವಾಗಿ ಮರಣ ಹೊಂದುತ್ತದೆ ಮೊದಲನೆಯದಾಗಿ ಎಲೆಗಳು ಕಂದು ಬಣ್ಣವಾಗಿ, ಕುಂದಿ ಮರವು ಪೂರ್ಣ ಒಣಗಿ ಹೋಗುತ್ತದೆ. ಆದರೆ ಈ ಮರವು ಒಂದೇ ರಾತ್ರಿಯಲ್ಲಿ ಒಣಗಿ ಹೋಯಿತು.

ಹೌದು, ಒಂದು ಅದ್ಭುತ - ಆದರೆ ವಿಚಿತ್ರವಾದ ಅದ್ಭುತ. ಶಿಷ್ಯರು ಆಶ್ಚರ್ಯಪಟ್ಟರು. ಪೇತ್ರನು, "ಗುರುವೇ, ಇಗೋ, ನೀನು ಶಾಪಕೊಟ್ಟ ಅಂಜೂರದ ಮರವು ಒಣಗಿ ಹೋಗಿದೆ" ಅಂದನು (ಮಾರ್ಕ 11:21). ಯೇಸು *ಏಕೆ* ಈ ಅದ್ಭುತವನ್ನು ಮಾಡಿದನೆಂದು ಬರಹಗಾರರು ಆಶ್ಚರ್ಯಪಡುತ್ತಾರೆ. ಅದನ್ನು ಆತನು *ಹೇಗೆ* ಮಾಡಿದನೆಂದು ಶಿಷ್ಯರು ಯೇಸುವನ್ನು ಕೇಳಿದರು (ಮತ್ತಾಯ 21:20).

ನಂಬಿಕೆಯ ಶಕ್ತಿ ಕುರಿತಾಗಿ ಈಗಾಗಲೇ ಬೋಧಿಸಿದ್ದನ್ನು ಆತನು ಪುನಃ ತಿಳಿಸಿದನು (ಮಾರ್ಕ 11:22-24; ಮತ್ತಾಯ 21:21, 22; ಮತ್ತಾಯ 17:20).[48] ನಂತರ ಆತನು ಇತರರನ್ನು ಕ್ಷಮಿಸುವ ಬಗ್ಗೆ ಎಚ್ಚರಿಕೆ ನೀಡಿದನು (ಮಾರ್ಕ 11:25, 26). ಆತನು ಮರವನ್ನು ಶಪಿಸಿದಂತೆ, ಶಿಷ್ಯರು ಮನುಷ್ಯರನ್ನು ಶಪಿಸಬೇಕೆಂಬ ಸೂಚನೆಯನ್ನು ಆತನು ನೀಡುತ್ತಿರುದಿಲ್ಲ.

ಈ ವಿಧವಾದ ಅದ್ಭುತ, ಯೇಸುಮಾಡಿದ ವಿಶಿಷ್ಯ ಅದ್ಭುತ, ಇದನ್ನು ಇಲ್ಲಿಗೆ ನಿಲ್ಲಿಸಬಹುದು. ನಂತರದವುಗಳು ಕರುಣೆಯ ಹಾಗೂ ತೀರ್ಪಿನ ಕುರಿತ ಅದ್ಭುತಗಳಾಗಿವೆ. ಇದನ್ನು "ಶಿಕ್ಷೆಯ" ಮಹತ್ಕಾರ್ಯ ಎಂದು ತಿಳಿಯಬಾರದಷ್ಟೆ.[48] ಅಂಜೂರದ ಮರ ಹಾಗೂ ಆತನು ಯೆರೂಸಲೇಮಿನಲ್ಲಿ ಸಂಧಿಸಲಿದ್ದ ಜನರ ನಡುವೆ ಬಂದು ಹೊಂದಾಣಿಕೆಯಿದೆ. ಮೆಕ್‌ಗಾರ್ವೆಯವರು, "ಇತರೆ ಮರಗಳಿಗಿಂತ ಇದರಲ್ಲಿರುವ ವಿಭಿನ್ನತ್ತಿ ತೋರಿಕೆ, ಫಲ ಹೀನತೆ, ತೀರ್ಪು ಇದನ್ನು ಯೆಹೂದ್ಯ ಜನರಿಗೆ ಹೋಲಿಕೆಯಾಗಿದೆ."[50] ಎಂದಿರುವರು. ಈಗ ಯೇಸು ಪಸ್ಕ ಹಬ್ಬದ ಗೋಜಲಿನ ನಡುವೆ ಇದ್ದನು. ಇದು ಆಳವಾದ, ಆತ್ಮೀಕವಾದ ಸಾಕ್ಷಿ, ಆದರೆ ಆದರೆ ಅದರಲ್ಲಿ "ಬರೀ ಎಲೆಗಳಿದ್ದವು" (ಮಾರ್ಕ 11:13).

ಆದ್ದರಿಂದ ವ್ಯಯಕ್ತಿಕವಾಗಿ ಆಳವಡಿಸಿಕೊಳ್ಳುವ ಸಾಧ್ಯತೆಯಿಲ್ಲ. ಆತನ ಅನುಯಾಯಿಗಳಾದ ಪ್ರತಿಯೊಬ್ಬರು "ಫಲಭರಿತರಾಗಬೇಕು" ಎಂದು ಸತ್ಯವೇದ ಎಚ್ಚರಿಸುತ್ತದೆ (ಮತ್ತಾಯ 7:19; ಮಾರ್ಕ 4:20; ಯೋಹಾನ 15:2, 8, 16; ರೋಮಾಪುರ 7:4; ಗಲಾತ್ಯ 5:22, 23). "ನಮ್ಮಲ್ಲಿ ಆತನು ಬರೀ ಎಲೆಗಳನ್ನು ಕಾಣಬಾರದಷ್ಟೆ?"

## ಮುಕ್ತಾಯ

ಇದರಲ್ಲಿ ಅವಕಾಶಗಳ ಕುರಿತ ಪಾಠಗಳಿರುತ್ತವೆ. ಗ್ರೀಕರು, "ಅವಕಾಶವನ್ನು" ಮುಂಭಾಗದಲ್ಲಿ ಉದ್ದವಾದ, ಹಿಂಬಾಗದಲ್ಲಿ ಗಿಡ್ಡವಾದ ಕೂದಲಿರುವ ಮಹಿಳೆಗೆ ಹೋಲಿಕೆ ಮಾಡಿದೆ. ಆಕೆಯು ಬರುವಾಗ ಆಕೆಯ ಕೂದಲನ್ನು ಹಿಡಿದು ಎಳೆಯಬಹುದು, ಆದರೆ ಆಕೆ ಹಿಂದಿರುಗುವಾಗ, ಎಳೆಯಲು ಅಸಾಧ್ಯ. ಅಲಕ್ಷ್ಯಮಾಡಿದ ಅವಕಾಶಗಳು ನಿತ್ಯವಾಗಿ ಕಳೆದು ಹೋಗುತ್ತವೆ. ಅವಕಾಶಗಳು ಪ್ರಮುಖವಾದವುಗಳಾಗಿವೆ. ನಮ್ಮಲ್ಲಿ ಯಾರೂ ಸಹ ಅವಕಾಶಗಳನ್ನು ಕಳೆದುಕೊಳ್ಳದಿರಲಿ:[51]

- ಕ್ರಿಸ್ತನನ್ನು ನಂಬುವ ಅವಕಾಶ.
- ಕರ್ತನನ್ನು ಸ್ತೂತಿಸುವ.
- ಆತ್ಮೀಕ ಪುನಃ ಸ್ಥಾಪನೆಯ.
- ಪ್ರತಿಫಲ ನೀಡುವ.

ಲೂಕ 21:37, 38ರಲ್ಲಿ, ಯೇಸುವಿನ ಸೇವಾ ಅವಧಿಯ ಕಡೇಯ ವಾರದ ಘಟಾನಾವಳಿಗಳನ್ನು ದಾಖಲು ಮಾಡಲಾಗಿದೆ. ಹಗಲಿನಲ್ಲಿ ದೇವಾಲಯದಲ್ಲಿ ಉಪದೇಶಿಸಿ,

ರಾತ್ರಿ ಸಮಯವನ್ನು ಎಣ್ಣೆ ಮರಗಳ ಗುಡ್ಡದಲ್ಲಿ ಕಳೆಯುತ್ತಿದ್ದನು. ಜನರು ಮುಂಜಾನೆಯಲ್ಲಿ ಎದ್ದು ಬೋಧನೆ ಕೇಳಲು ಆಲಯಕ್ಕೆ ಬರುತ್ತಿದ್ದರು: ಮುಂದಿನ ಪಾಠಗಳಲ್ಲಿ, ಆ ದಿನಗಳಲ್ಲಿ ಪ್ರಮುಖವಾದ "ಮಂಗಳ ವಾರದ" ಕುರಿತ ಪಾಠ ವಾರ, ಅದು ಪ್ರಶ್ನೆಯು ಮಹಾದಿನ.

---

## ಮಾಹಿತಿ

"ಅಂತಿಮ ದಿನಗಳು" ಮತ್ತು "ಲೋಕವನ್ನು ಬದಲಾಯಿಸಿದ ಎಂಟು ದಿನಗಳು" ಎಂಬ ಎರಡು ತಲೇ ಬರಹ.

ಪ್ರಸಂಗಕ್ಕೆ ಸಂಬಂಧಿಸಿದಂತೆ ಉಪಯೋಗಿಸಿಲಿ. ಯೆರೂಸಲೇಮಿ ಪ್ರವೇಶ ಕ್ರೈಸ್ತರ ಇಷ್ಟದ ಪಾಠ. ಕಪಟತನ ಹಾಗೂ ಫಲಭರಿತವಾದ ಉದಾಹರಣೆಗೆ ಅಂಜೂರ ಮರದ ದೃಷ್ಟಾಂತವನ್ನು ಹೇಳಿರಿ. "ಬರೀ ಎಲೆಗಳೇ."

"ಆಕೆಯು ಮಾಡಬೇಕಾದದ್ದನ್ನೇ ಮಾಡಿದಳೆ." ಸ್ತ್ರೀಯರು ಏನು ಮಾಡಬೇಕು, "ಕರ್ತನಿಗೆ ಅದು ಅಗತ್ಯ" (ಲೂಕ 19:31, 34) ಇದರಿಂದ ದೇವರು ನಮ್ಮ ಸಮಯ, ತಲಾಂತು ಸ್ವಾಸ್ತ್ಯವನ್ನು ಉಪಯೋಗಿಸುವನು ಎಂದು ಪ್ರಸಂಗಿಸಿ, ನಾಶವಾದವರ ಕುರಿತು ನಮ್ಮಲ್ಲಿ ಕನಿಕರವಿರಬೇಕು ಎಂಬುದಕ್ಕೆ "ಯೇಸು ಆತ್ಮನು" ಎಂಬ ನಿದರ್ಶನ ಬಳಸಿ.

"ಬಾಗಿರುವ ಪ್ರಪಂಚವನ್ನು ನೋಡಿಯೂ, ಒಣಗಿದ ಕಣ್ಣುಗಳು" ಎಂದು ಒಬ್ಬ ಪ್ರಸಂಗಿ ಹೇಳಿದ್ದಾರೆ. ಲೂಕ 19:40, "ಕಲ್ಲುಗಳು ಕೂಗುತ್ತವೆ" ಎಂಬುದಕ್ಕೆ ಸತ್ಯವೇದವು ಪುರಾತನ ವಾಸ್ತು ಶಾಸ್ತ್ರದ ದಾಖಲೆಗಳನ್ನು ಹೊಂದಿದೆ ಎಂದು ತಿಳಿಸಬಹುದು.

---

ಟಿಪ್ಪಣಿಗಳು

[1]ಸಂಭಾಷಣೆಯಲ್ಲಿ ಸಹಕರಿಸುವ ಸಾಧನೆಗಳಾಗಿ ಯೇಸುವಿನ ಕಡೇಯ ದಿನಗಳು ಎಂಬ ಪಾಠದಲ್ಲಿ ದಿನಗಳಿಗಿರುವ ಇಂದಿನ ಹೆಸರುಗಳನ್ನು ನಾನು ಬಳಸುತ್ತೇನೆ (ಅದು ಆರಂಭವಾಗಿ ಮಧ್ಯರಾತ್ರಿಯಲ್ಲಿ ಮುಗಿಯುವುದು) ಯೂದರು ಬಳಸುವ ಮೊದಲನೆಯ ದಿನ ಎರಡನೆಯ ದಿನ ಎಂಬವುಗಳ ಸ್ಥಳಗಳಲ್ಲಿ ಈ ದಿನಗಳನ್ನು ಬಳಸಿದ್ದೇನೆ (ಅವು ಆರಂಭಿಸಿ ಸೂರ್ಯಸ್ತಮಯದಲ್ಲಿ ಮುಗಿಯುವೆವು). [2]Richard Rogers, *The Life of Christ and His Teaching* (Lubbock, Tex.: Sunset International Bible Institute External Studies Department, 1995), 59. [3]Hester ರವರು ಹೀಗೆ ಹೇಳಿದ್ದಾರೆ: "ಯೇಸುವಿನ ಸೇವೆಯ ಬಗ್ಗೆ ತಿಳಿಸುವ ಅಧ್ಯಯಗಳಲ್ಲಿ ಶೇಕಡ ನಾಲವತ್ತು ಪ್ರಮಾಣ ಭಾಗವನ್ನು ಆತನ ಕಡೆಯ ದಿನಗಳ ಅನುಭವಗಳಿಗೆ ಮೀಸಲಾಗಿವೆ." (H. I. *Hester, The Heart of the New Testament* [Liberty, Mo.: Quality Press, 1963], 187.) [4]"ಯೆರೂಸಲೇಮ ಕರ್ತನನ್ನು ಅಂಗೀಕರಿಸಿದ್ದರೆ ಏನಾಗಬಹುದಿತ್ತು? ನಮ್ಮಲ್ಲಿ ಉತ್ತರವಿಲ್ಲ. ಅವರು ನಿರಾಕರಿಸಿದರು ಎಂದು ಕೊನೆಯದಾಗಿ ನಾವು ಅರಿತಿರುವೆವು." (B. S. Dean, "An Outline of New Testament History," Truth for Today [March 1992]: 24.) [5]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ "ಯೆಹೂದ್ಯರ ಹಬ್ಬಗಳು" ಎಂಬ ಚಾರ್ಟ್‌ನ್ನು ನೋಡಿ. ಈ ಹಬ್ಬಗಳು ಹೇಗೆ ಉಂಟಾದವು ಎಂಬುದರ ಬಗ್ಗೆ ಸ್ವಲ್ಪ ವಿರಾಮ ತೆಗೆದುಕೊಂಡು ಹೇಳುವುದರಿಂದ ಉಪಯುಕ್ತವಾಗಿರುತ್ತದೆ. [6]"Paschal" ಎಂದರೆ "ಪಸ್ಕ" ಎಂದರ್ಥ. ಈ ಪದವು ಗ್ರೀಕ್ ಪದವಾದ "Passover" ಎಂಬ ಪದದಿಂದ ಬಂದಿದೆ, ಇದು ಇಬ್ರಿಯ ಪದವಾದ "ಪಸ್ಕ" ದಿಂದ ಬಂದಿದೆ. [7]ಹಬ್ಬದ ದಿನದಂದು ಮಿಲಿಯಾಂತರ ಜನರು ಸೇರುತ್ತಿದ್ದರು - ಮೂರು ಹಬ್ಬಗಳಿಗಿಂತ ಈ ಹಬ್ಬವು ಪ್ರಖ್ಯಾತವಾದದ್ದು. [8]ನಮ್ಮ ದೇಶದ ಪ್ರಕಾರ "ಆತನನ್ನು ಹಿಡಿಯಲು ಪತ್ರ ನೀಡಿದರು." ಅಥವಾ ಆತನ "ತಲೆ ಮೇಲೆ ಬೆಲೆಯನ್ನು ಇಟ್ಟರು" ಎಂದು ಹೇಳುತ್ತಾರೆ. ನಿಮ್ಮ ಓದುಗರಿಗೆ ಅರ್ಥವಾಗುವದನ್ನು ಬಳಸಿ. [9]" 'ಬೇಕಾಗಿದ್ದಾರೆ' ಎಂಬ ನಾಮ ಫಲಕ ಹಾಕಿರುತ್ತಾರೆ." ಎಂದು ನಮ್ಮ ದೇಶದಲ್ಲಿ ಹೇಳುವುದುಂಟು. [10]"ಮರಣವು ಸಮೀಪವಾದಾಗ" ಎಂಬ ಪಾಠದಲ್ಲಿರುವಾಗ ಮುಕ್ತಾಯವನ್ನು ನೋಡಿ.

[11]ಮತ್ತಾಯ, ಮಾರ್ಕ, ಲೂಕರು ಯೆರಿಕೋವಿನಿಂದ, ಯೆರೂಸಲೇಮಿನ ಪ್ರವೇಶ ಮಾಡಿದನು (ಮತ್ತಾಯ 20:29; 21:1; ಮಾರ್ಕ 10:46; 11:1; ಲೂಕ 19:28, 29). ಬೇಥಾನ್ಯದ ಊಟದ ಬಗ್ಗೆ

ಮತ್ತಾಯ ಮತ್ತು ಮಾರ್ಕನು ಕೊನೆಯದಾಗಿ ದಾಖಲಿಸಿದ್ದಾರೆ (ಮತ್ತಾಯ 26:6-13; ಮಾರ್ಕ 14:3-9). ಯೋಹಾನನು ಮಾತ್ರವೇ ಈ ಊಟದ ಬಗ್ಗೆ ಕ್ರಮಾಂಕವನ್ನು ತಿಳಿಸಿದ್ದಾನೆ. ಪಸ್ಕದ ಆರು ದಿವಸಗಳ ಹಿಂದೆ ಯೇಸು ಬೆಥಾನ್ಯಕ್ಕೆ ಹೋದನು (ಯೋಹಾನ 12:1) ಮತ್ತು ಬೆಥಾನ್ಯದ ಊಟದ ನಂತರ "ಮರುದಿನ ಪಟ್ಟಣದ ಪ್ರವೇಶ" ವಾಯಿತು (ಯೋಹಾನ 12:12). ಬೇಥಾನ್ಯದಲ್ಲಿ ನಡೆದ ಘಟನೆಗಳಿಗೆ ಯೋಹಾನನ ಕ್ರಮಾಂಕವನ್ನು ನಾವು ಬಳಸುವೆವು. [12]"ಯೇಸುವಿನ ಕಾಲದ ಪಾಲೆಸ್ತೇನ್ ಸೇವೆಯ" ಭೂಪಟವನ್ನು ನೋಡಿರಿ. [13]ಯೆಹೂದ್ಯರ ವರ್ಷದ ಪ್ರಕಾರ, ಮೊದಲ ತಿಂಗಳ ಹದಿನಾಲ್ಕನೆಯ ದಿನದ ಸಾಯಂಕಾಲ ಪಸ್ಕದ ಊಟ ಮಾಡುತ್ತಿದ್ದರು. ಆ ವರ್ಷದಲ್ಲಿ ತಾರಿಕು ಶುಕ್ರವಾರದ ದಿನದಂದು ಬಂತು, ಅದು ಸಬ್ಬತ್ತಿನ ಹಿಂದಿನ ದಿನ (ನೋಡಿ ಯೋಹಾನ 19:31). ಯೇಸು ಸಬ್ಬತ್ ದಿನದಂದು ಪ್ರಯಾಣಿಸಲಿಲ್ಲವೆಂದು ನೆನಸಿದರೆ, ಆತನು ಸಬ್ಬತ್ ದಿನದ ಮುಂದಿನ ದಿನವೇ ಬಂದಿರಬಹುದು, ಪಸ್ಕ ಭೋಜನಕ್ಕೆ ಒಂದು ವಾರದ ಮುಂಚೆ ಬಂದಿರಬಹುದು. [14]"ಅವರು" ಯಾರೆಂಬದರ ಬಗ್ಗೆ ಸ್ಪಷ್ಟವಾಗಿ ಇಲ್ಲ. ಹಬ್ಬದ ಭೋಜನವು ಸೀಮೋನನ ಮನೆಯಲ್ಲಿತ್ತು. ಮಾರ್ಥಳ ಮನೆಯಲಲ್ಲ, "ಅವರು" ಎಂಬುದರಲ್ಲಿ ಬಹುಶ ಮಾರ್ಥ ಮತ್ತು ಮರಿಯಳಿಗಿಂತ ಬೇರೆಯವರು ಸೇರಿಸಲಾಗಿದೆ. ಹಳ್ಳಿಯ ಜನರು ಕರ್ತನಿಗೆ ಆ ಊಟವನ್ನು ನೀಡಿರಬಹುದು. ಮಾರ್ಥಳು "ನೆರವಾಗಿದ್ದಳು" (ಯೋಹಾನ 12:2), ಔತಣಕ್ಕೆ ಮುಖ್ಯವಾಗಿ ಅವಳೇ ಸಹಕರಿಸಿರಬಹುದು. [15]ಬೇರೆ ಬೇರೆ ಬರಹಗಾರರ ಪ್ರಕಾರ "ಸಿಮೋನನು" ಮಾರ್ಥ, ಮರಿಯಳ, ಹಾಗೂ ಲಾಜರನ ತಂದೆಯಾಗಿರಬಹುದು. [16]ಲೂಕ 7:36-5ರ ಅಭಿಷೇಕದೊಂದಿಗೆ ಗೊಂದಲ ಮಾಡಬಾರದು. ಹಲವು ವಿಷಯಗಳು ಒಂದೇ ತರವಾಗಿದೆ; ಆದರೆ ಸ್ಥಳ, ಸಮಯ, ಸಂದರ್ಭ, ಭಾಗವಹಿಸಿದವರು, ಮತ್ತು ಫಲಿತಗಳು ಭಿನ್ನವಾಗಿವೆ. ಇದರ ಮುಂಚಿನ ಅಭಿಷೇಕದ ಬಗ್ಗೆ "ಯೇಸು ನಮಗಾಗಿ ಚಿಂತಿಸುತ್ತಾನೋ?" ಮತ್ತು "ಪ್ರೀತಿ, ಕಣ್ಣೀರು, ಮತ್ತು ಕ್ಷಮಾಪಣೆ" ಎಂಬ ಪಾಠಗಳನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ನೋಡಿರಿ. [17]ಟೀಕೆಯ ಯೂದನಿಂದ ಬಂದಿತು (ಯೋಹಾನ 12:4, 5), ಬಹುಶ ಆತನು ಯೇಸುವಿನ ಎಚ್ಚರಿಕೆಯನ್ನು ಹೊಂದಿರಬಹುದು. ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿ ಬೆಥಾನ್ಯದ ಔತಣದ ಕಥೆಯನ್ನು ಯೂದನು ಮೋಸಮಾಡುವ ಕಥೆಯು ಅವಲಂಭಿಸಿತು. ಯೂದನ ದುಷ್ಕ್ರಿಯೆಯನ್ನು ವಿವರಿಸಲು ಈ ಔತಣದ ಕಥೆಯನ್ನು ಅಲ್ಲಿ ಹೇಳಿರಬಹುದು. [18]"ನಿನ್ನ ತೈಲದ ಭರಣಿಯನ್ನು ಒಡೆದು ಹಾಕಿರುವೆಯಾ?" ಎಂಬ ಮುಂದಿನ ಪಾಠ ನೋಡಿರಿ. [19]B. S. Dean, "An Outline of New Testament History," *Truth for Today* (March 1992): 24 ರಿಂದ ಈ ವಾಕ್ಯವು ತೆಗೆದುಕೊಳ್ಳಲಾಗಿದೆ. [20]ಈ ಯೋಜನೆಯನ್ನು ಮಹಾ ಸಭೆಯವರು ಪೂರೈಸಿಲ್ಲವೆಂದು ನಾವು ಅರಿತಿರುವೆವು, ಯೇಸುವನ್ನು ಶಿಲುಬೆಗೆ ಹಾಕಿಸಿರುವದರಿಂದ ಅವರ ರಕ್ತಪೀಪಾಸೆಯನ್ನು ನೀಗಿಸಿತು.

[21]ಇದು ವಾರದ ಮೊದಲನೆ ದಿವಸ. ಯೂದರಿಗೆ ಅವರ ಕೆಲಸದ ವಾರದಲ್ಲಿ ಆರಂಭದಿಂವಾಗಿದೆ ಎಂಬುದನ್ನು ನೆನಪಿಟ್ಟು ಕೊಳ್ಳಿ, ಅದು ವಿಶ್ರಾಂತಿ ಹೊಂದಿದ ದಿನ ನಂತರ ಕೆಲಸದಲ್ಲಿ ಸೇರುವ ದಿನ. ಪಟ್ಟಣವು ಅನೇಕ ಚಟುವಟಿಕೆಗಳಿಂದ ತುಂಬಿರುತ್ತದೆ. [22]*ಕ್ರಿಸ್ತನ ಜೀವನ ಚರಿತ್ರೆ, 1ರಲ್ಲಿ* "ನಾಲ್ಕು ಸುವಾರ್ತೆಗಳ ವರ್ಣನೆ" ಎಂಬ ಪಾಠವನ್ನು ನೋಡಿ. [23]ಬೆಥಾಜ್ಯದ ಸ್ಥಳ ವಿಳಾಸ ಗೊಂದಲಮಯವಾಗಿದೆ, ಸುವಾರ್ತೆಗಳ ಪ್ರಕಾರ ಬೆಥಾನ್ಯದ ಹತ್ತಿರ ಬೆಟ್ಟದ ಮೇಲೆ ಇರಬಹುದು. [24]ಈ ಪ್ರಾಣಿಗಳ ಬಗ್ಗೆ ಸಿದ್ಧತೆ ಮಾಡಿದೆಯೋ ಇಲ್ಲವೋ ಎಂಬುದರ ಬಗ್ಗೆ ನಮಗೆ ಹೇಳಲ್ಪಟ್ಟಿಲ್ಲ ಅಥವಾ ಯೇಸು ಆ ಪ್ರಾಣಿಗಳ ಯಜಮಾನನ್ನು (ಕರ್ತನ ಶಿಷ್ಯನಾಗಿರಬಹುದು) ಅರಿತಿರುವನೋ ಎಂಬುದು ಗೋತ್ತಿಲ್ಲ. ಕರ್ತನಿಗೆ ಅವಸರವಾಯಿತು ಎಂಬುದು ಯಜಮಾನನು ಕರ್ತನ ಶಿಷ್ಯನಾಗಿರಬಹುದೆಂದು ಸೂಚಿಸುತ್ತದೆ. ಮತ್ತಾಯನು ಎರಡು ಪ್ರಾಣಿಗಳ ಬಗ್ಗೆ ಹೇಳುತ್ತಾನೆ, ಇತರರು ಯೇಸು ಬಳಸಿದ ಒಂದನ್ನು ಮಾತ್ರ ಹೇಳುತ್ತಾರೆ. [25]ಯೇಸು ಯಾರು ಹತ್ತದಿರುವ ಮರಿಯನ್ನು ಬಳಸಿರಬಹುದು (ಮಾರ್ಕ 11:2). ಅನೇಕ ಬರಹಗಾರರು ಪವಿತ್ರಾವಾದ ಕೆಲಸಕ್ಕೆ ಬಳಕೆಯಲ್ಲಿರುವ ಪ್ರಾಣಿಯನ್ನು ಉಪಯೋಗಿಸುವುದು ಯೋಗ್ಯವಿಲ್ಲವೆಂದು ಹೇಳುತ್ತಾರೆ (ನೋಡಿ ಅರಣ್ಯಕಾಂಡ 19:2; ಧರ್ಮೋಪದೇಶಕಾಂಡ 21:3; 1 ಸಮುವೇಲ 6:7). ಮರಿಯನ್ನು ಸಾದುಗೊಳಿಸುವಂತೆ ತಾಯಿಯನ್ನು ಕರೆತಂದಿರಬಹುದು. [26]ಸೊಲೊಮೋನನಿಗಾಗಿ ದಾವೀದನು ಹೇಸರಕತ್ತೆಯನ್ನು ನೀಡಿದ್ದನು (1 ಅರಸು 1:33). ಹೇಸರ ಕತ್ತೆಯು ಕುದುರೆ ಮತ್ತು ಕತ್ತೆಯ ಮಿಶ್ರ ಜಾತಿಯ ಪ್ರಾಣಿಯಾಗಿದೆ. [27]ಜೆಕೆರ್ಯ 9:9ರ ಪ್ರವಾದನೆ ಈಡೇರಿಕೆ, ಆದರೆ ಪದಪ್ರಯೋಗಗಳು ಯೆಶಾಯ 62:11 ರಿಂದ ಬಳಸಲಾಗಿದೆ. ಪ್ರವಾದನೆಯಲ್ಲಿ "ಚಿಯೋನ್" ಯೆರೂಸಲೇಮಿನ ಇನ್ನೊಂದು ಹೆಸರು. [28]ಗೌರವಾರ್ಥವಾಗಿ ನೆಲಹಾಸು ಹಾಗೂ ಪುಷ್ಪಗಳನ್ನು ಜನರು ಬಳಸುತ್ತಾರೆ. ಈ ಆಚಾರವನ್ನು, ಮದುವೆಯಲ್ಲಿ ಹೂಗಳನ್ನು ಹಾಕುವದರ ಬಗ್ಗೆ ಆಗಿದೆ. ಮತ್ತು ನಾವು "ರೆಡ್ ಕಾರ್ಪೆಟ್‌ನ್ನು" ಬಳಸುತ್ತೇವೆ. [29]"Hosanna" ಎಂಬ ಪದಕ್ಕೆ ಅರ್ಥವು

"ರಕ್ಷಿಸು!" (Orville E. Daniel, *A Harmony of the Four Gospels,* 2d ed. [Grand Rapids, Mich.: Baker Books, 1996], 150). [30]25 ಮತ್ತು 26 ವಚನಗಳನ್ನು ಪ್ರತ್ಯೇಕವಾಗಿ ಗಮನಿಸಿ. ಕೀರ್ತನೆ 118ನ್ನು ಮೆಸ್ಸೀಯನ ಕೀರ್ತನೆ ಎನ್ನುವರು ಪ್ರತ್ಯೇಕಿಸಿ 22 ಮತ್ತು 23ನ್ನು ಗಮನಿಸಿ, ಇವು ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಉಲ್ಲೇಖಿಸಲಾಗಿದೆ (ಮತ್ತಾಯ 21:42; ಅಪೊಸ್ತಲರ ಕೃತ್ಯಗಳು 4:11, ಉದಾಹರಣೆಗಾಗಿ).

[31]"ಹಲೆಲ್" ಸ್ತುತಿ (ಇಬ್ರಿಯ) ಎಂದು ಅರ್ಥ. [32]ಯೂದರ ಮನಸ್ಸಿನಲ್ಲಿ ಖರ್ಜೂರದ ಗರಿ, ಜಯದ ಸಂಕೇತ. [33]ಫರಿಸಾಯರು ಜಗಳಗಂಟರೂ, ಹೋರಾಡುವವರೂ ಆಗಿದ್ದರೆಂದು ಲೂಕ 19:39 ಸೂಚಿಸುತ್ತದೆ. [34]ಹಬ್ಬದಲ್ಲಿ ರೋಮಾಯರ ಸಿಪಾಯಿಗಳು ಹೆಚ್ಚಾಗಿ ಇರುತ್ತಿದ್ದರು. ಪಟ್ಟಣ ಪ್ರವೇಶವು ಶಾಂತಿಯುತವಾಗಿತ್ತು. [35]ಯೆರೂಸಲೇಮಿನ ಬಗ್ಗೆ ಯೇಸುವಿನ ಅಳುವಿನ ಕುರಿತು ಹೋಲಿಸಿ ಲೂಕ 13:34-35 (ಮತ್ತು ನೋಡಿ ಮತ್ತಾಯ 23:37-39). [36]ಈ ವಾಕ್ಯದಲ್ಲಿ "ನಿಮ್ಮ ಮಕ್ಕಳು" ಅಂದರೆ ಯೆರೂಸಲೇಮಿನ ನಾಗರೀಕರನ್ನು ಸೂಚಿಸುತ್ತದೆ. [37]"ಪ್ರತಿ ಸಂಗತಿಗೂ ಒಂದು ಪ್ರಥಮ ಸಮಯ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. [38]ಮತ್ತಾಯ ಮತ್ತು ಲೂಕರು ಯೇಸುವಿನ ವಿಜಯದ ಪ್ರವೇಶವನ್ನು ದೇವಾಲಯದ ಶುದ್ಧತೆ ಕಾರ್ಯದೊಂದಿಗೆ ಒಟ್ಟುಮಾಡಿ ತಿಳಿಸಿದ್ದಾರೆ. ಮಾರ್ಕನು, ಶುದ್ಧತೆ ಕಾರ್ಯವು ಮರುದಿನ ಜರುಗಿತು ಎಂದಿರುವನು (ಮಾರ್ಕ 11:1, 11, 12, 15). ಇದೇ ಆಗಿದ್ದರೆ ಯೇಸು ದೇವಾಲಯದ ಶುದ್ಧತೆ ಕಾರ್ಯವನ್ನು ಭಾನುವಾರ ಏಕೆ ಮಾಡಲಿಲ್ಲ? ಭಾನುವಾರ ಕ್ರಿಸ್ತನು ದೇವಾಲಯದಲ್ಲಿರುವುದು ತಡವಾದದ್ದರಿಂದ (ಮಾರ್ಕ 11:11), ದೇವಾಲಯದಲ್ಲಿದ್ದ ವ್ಯಾಪಾರಿಗಳು ಆ ದಿನ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹೋರಟು ಹೋಗಿರಬಹುದೆಂದು ಹಲವರು ಯೋಚಿಸುತ್ತಾರೆ. ಯೇಸು ಭಾನುವಾರ ಪರಿಸ್ಥಿತಿಗಳನ್ನು ನೋಡಿ ಮಾಡಬೇಕಾಗಿದ್ದನ್ನು ಮಾಡಲು ಸೋಮವಾರ ಬಂದಿರಬಹುದೆಂದು ಮತ್ತೆ ಕೆಲವರು ಹೇಳುತ್ತಾರೆ. [39]"ಮಾರಾಟಗಾರರು" ಎಂದು ಇಲ್ಲಿ ಬಳಸಿದ ಗ್ರೀಕ್ ಪದವು ಪಾತ್ರೆಗಳು, ಪಿಠೋಪಕರಣಗಳು. [40]ಯೇಸು 12 ವರುಷದವನಾಗಿರುವಾಗ, ದೇವಾಲಯಕ್ಕೆ ಭೇಟಿ ನೀಡಿದಂತೆ ಈ ಮಕ್ಕಳು ಭೇಟಿ ನೀಡಿದ್ದರು (ಲೂಕ 2:41-51).

[41]ಈ ಉಲ್ಲೇಖನವು ಸೆಂಪ್ಟೆಜೆಂಟಿನಲ್ಲಿ ಕೀರ್ತನೆ 8:2 ರಿಂದ ತೆಗೆದುಕೊಳ್ಳಲಾಗಿದೆ. [42]ಯೂದನ ರಹಸ್ಯದ ಬಯಲು. [43]ಗ್ರೀಕರು ಯೇಸುವನ್ನು ಹುಡುಕಿದರು ಎಂಬುದು ಸ್ಥಳದೊಂದಿಗೆ ಸಮನ್ವಯವಾಗುತ್ತದೆ (ಮತ್ತು ಫಲಿತವಾಗಿ ಉಪದೇಶಿಸಲ್ಪಟ್ಟಿತು; ಯೋಹಾನ 12:20-50), ಅದು ಸೋಮುವಾರ ನಡೆದಿರಬಹುದು. ಚಟುವಟಿಕೆಯಿಂದ ತುಂಬಿದ ಮಂಗಳವಾರವಾಗಿರಬಹುದೆಂದು ಹಲವರು ಹೇಳುತ್ತಾರೆ, ಮತ್ತು ಅದನ್ನೆ ನಾನು ಸಂಕ್ಷಿಪ್ತದ ವರ್ಣನೆಯಲ್ಲಿ ಹೇಳಿದ್ದೇನೆ. [44]ವಾರದ ರಾತ್ರಿಗಳಲ್ಲಿ ಯೇಸು ತಂಗಿದ್ದು ಎಲ್ಲಿ ತಂಗಿದ್ದನೆಂಬುದು ವ್ಯತ್ಯಾಸವಾಗಿತ್ತು (ನೋಡಿ ಲೂಕ 21:37). ಆದ್ದರಿಂದ ಹಿರೀ ಸಭೆಯವರು ಆತನನ್ನು ಹುಡುಕುವದು ಕಷ್ಟವಾಯಿತು. [45]ಮರದಲ್ಲಿ ಫಲ ಇಲ್ಲದೆಂಬುದನ್ನು ಯೇಸು ಅರಿಯದೆ ಇರುವುದು ಆತನ ದೈವ ವಿಶೇಷ ಹಕ್ಕುಗಳನ್ನು ಬಿಟ್ಟು ಬಂದುದ್ದನ್ನು ಉದಾಹರಿಸುತ್ತದೆ (ಫಿಲಿಪ್ಪಿ 2:6, 7) - ಈ ಸಂದರ್ಭದಲ್ಲಿ ಸರ್ವಂತಾರಯಾಮಿ ಎಂಬುದು (ಮತ್ತಾಯ 24:36). [46]ನೋಡಿ ಮತ್ತಾಯ 24:32. "ಮೇ" ಹಾಗೂ ಜೂನ್ ಮೊದಲ ಹಣ್ಣಿನ ಸುಗ್ಗಿಯಾದರೆ ಆಗಸ್ಟ್ ಅಥವಾ ಸೆಪ್ಟಂಬರ್‌ನಲ್ಲಿ ಎರಡನೆಯ ಸುಗ್ಗಿ. [47]ಮತ್ತಾಯನ ಪ್ರಕಾರ ಅಂಜೂರ ಮರದ ಘಟನೆಯು ಸೋಮವಾರ ಹಾಗೂ ಮಂಗಳವಾರದ ಮುಂಜಾನೆ ಒಟ್ಟಾಗಿ ನಡೆದಿರಬಹುದು; ಆದ್ದರಿಂದ ಆತನು ಹೀಗೆ ಬರೆದನು, "ಆ ಕ್ಷಣವೇ ಅಂಜೂರದ ಮರವು ಒಣಗಿಹೋಯಿತು" (ಮತ್ತಾಯ 21:19). ಯಾವ ಸಂದೇಹವಿಲ್ಲದೆ ಮರವು ಒಣಗಲು ಆರಂಭಿಸಿತು, ಆದರೆ ಶಿಷ್ಯರು ಮಾರನೆಯ ದಿನದ ವರೆಗೆ ಅದು ಒಣಗಿ ಹೋಗಿದ್ದನ್ನು ನೋಡಲಿಲ್ಲ. [48]"ನನ್ನ ಅಪನಂಬಿಕೆಯಲ್ಲಿ ಸಹಾಯಿಸು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿ. [49]John Franklin Carter, *A Layman's Harmony of the Gospels* (Nashville: Broadman Press, 1961), 250. [50]"ಯೇಸು ಅನ್ವಯಿಸಿಕೊಳ್ಳಬೇಕೆಂದು ಯಾವ ಸೂಚನೆಯನ್ನು ನೀಡಲಿಲ್ಲ ಆದ್ದರಿಂದ ಇದನ್ನು ನಾವು ಪ್ರಾಯೋಗಿಕವಾಗಿ ಮಾಡಬಾರದು" ಎಂದು J. W. McGarvey ರವರು ಎಂದು ಎಚ್ಚರಿಸಿದ್ದಾರೆ. (J. W. McGarvey and Philip Y. Pendleton, The Fourfold Gospel or *A Harmony of the Four Gospels* [Cincinnati: Standard Publishing Co., 1914], 581-82.)

[51]ನೀವು ಪಾಠವನ್ನು ಮುಗಿಸುವಾಗ ಮುಖ್ಯಾಂಶಗಳನ್ನು ಪುನರ್ ವಿಮರ್ಶಿಸಿ.